ಶ್ರೀ ಎಚ್. ಸಿದ್ದವೀರಪ್ಪ :—ಆ ತೀರ್ಮಾನಕ್ಕೆ ಬರಬೇಕು ಎನ್ನುವುದೇ ನನ್ನ ಆಸೆ.

ಶ್ರೀ ಬಿ. ಪುಟ್ಟಸ್ವಾಮಿ :—ಈಗ ಅಲ್ಲಿನ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲ. ಆದುದರಿಂದ ತಾವು ಯಾವಾಗ ಡಾಕ್ಟರನ್ನು ನೇಮಕ ಮಾಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ :—ಅಲ್ಲಿಗೆ ಹೋಗತಕ್ಕ ಡಾಕ್ಟರು ಯಾರಾದರೂ ಇದ್ದರೆ ಕರೆದುಕೊಂಡು ಬನ್ನಿ, ನೇಮಕ ಮಾಡೋಣ.

* *Minor Irrigation Tanks in Sira Taluk*

339. SRI T. TARE GOWDA (Kallambella)

Will the Minister of State for Minor Irrigation be pleased to state :—

(*a*) whether the estimate of the new minor tanks, Tavarekere, Gowdagere hobli, Sira taluk add Ganadahunase, Bukkapatna Hobli, Sira taluk, have been sanctioned and included in the programme of the year 1975-1976 ;

(*b*) it so, when the work of these tanks would be taken up ;

(*c*) whether Government has included Minor Irrigation works in the priority list of different schemes to be taken up by Government ?

SRI S. B. NAGARAL (Minister of State for Minor Irrigation)

(*a*) There are no proposals before Government for taking up fresh works during 1975-76.

(*b*) and (*c*) These works will be taken up, if feasible depending upon priorities on individual merits.

ಶ್ರೀ ಟಿ. ತಾರೇಗೌಡ :—3 ವರ್ಷಗಳಿಂದಲೂ ಚೀಫ್ ಇಂಜಿನಿಯರ್‌ಗೆ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರ್‌ಗೆ ಸಲಹೆಗಳನ್ನು ಕಳುಹಿಸಿದ್ದರೂ

ಇನ್ನೂ ಸರ್ಕಾರಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ನಿರಾ ತಾಲ್ಲೂಕು ಅಭಾವದ ದೃಷ್ಟಿಯಿಂದ ಕ್ಷಾಮಕ್ಕೆ ತುತ್ತಾದಂಥ ಪ್ರದೇಶ. ಸಣ್ಣ ನೀರಾವರಿಗೆ ಹೆಚ್ಚಿಗೆ ಹಣ ಒದಗಿಸುತ್ತಿದ್ದೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. 3 ವರ್ಷಗಳಿಂದ ಕೇಳಿಕೊಂಡರೂ ಕೂಡಾ ಇನ್ನೂ ಆಗಿಲ್ಲ. ಒಂದು-ಒಂದೂವರೆ ಲಕ್ಷದಲ್ಲಿ ನೀರಾವರಿ ಕಾಮಗಾರಿಗಳನ್ನು ಮಾಡದೇ ಹೋದರೆ ಜನಗಳಿಗೆ ನಾನು ಉತ್ತರ ಹೇಳುವುದು ಸ್ವಾಮಿ ?

‡ ಶ್ರೀ ಎಸ್. ಬಿ. ನಾಗರಾಳ್ :– ಸಂಬಂಧಪಟ್ಟ ಅಧಿಕಾರಿಗಳಿಗೆ ಬಹಳ ಕೆಲಸ ಇರುವುದರಿಂದ ನಿಧಾನವಾಗಿ ಸ್ಕ್ರುಟಿನಿ ಆಗುತ್ತಿದೆ. ಬೇಗನೆ ಮಾಡುವುದಕ್ಕೆ ತಿಳಿಸುತ್ತೇನೆ.

ಶ್ರೀ ಟಿ. ತಾರೇಗೌಡ :–ಆದ್ಯತಾ ಪಟ್ಟಿಯ ಪ್ರಕಾರ ಅವುಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ. ಈ ಆದ್ಯತೆಗೆ ಯಾವ ಯಾವ ಕಾರಣಗಳು ಎಂದು ಹೇಳುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್ :—ಆದ್ಯತೆ ಅಂದರೆ ಸ್ಕೀಮಿನ ಪ್ರಕಾರ ಎಷ್ಟು ಏಕರೆಗೆ ನೀರಾವರಿ ಆಗುತ್ತದೆ ಎನ್ನುವುದನ್ನು ನೋಡಿಕೊಂಡು, ಫೀಸಿಬಿಲಿಟಿ ಸೈಟ್ ಇದ್ದರೆ ಆದ್ಯತೆ ಮೇಲೆ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ :–ಈ ಕೆರೆ ಕಾಮಗಾರಿಗಳನ್ನು ಹಣದ ಅಭಾವದಿಂದ ಮುಂದೂಡುತ್ತಿದ್ದೀರಿ ಎಂದು ಕಾಣುತ್ತದೆ. ಇದಕ್ಕೆ ಹೆಚ್ಚಿಗೆ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ಎಸ್. ಬಿ. ನಾಗರಾಳ್ :– ಅಂಗಿರತಕ್ಕ ಸಣ್ಣ ನೀರಾವರಿಗೆ ಬಜೆಟ್‌ನಲ್ಲಿ ಹಣದ ಕೊರತೆ ಇಲ್ಲ. ಎಲ್ಲಾ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ 55 ರಿಂದ 60 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದಷ್ಟು ಜಾಗ್ರತೆ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡೋಣ.

**Amount Spent in Chamarajanagar P. W. D. Division*

423. SR R. KACHE GOWDA (Hanur) :—Will the Minister for Public Works be pleased to state :-

(*a*) the amount made available after "Letter of Credit" system came into force till the end of December